**ಓ.ಎಸ್ ನಂಃ 263/2011** **ಪಿ.ಡಬ್ಲ್ಯೂ-4**

**<u>ದಿನಾಂಕಃ 19-12-2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 3 ರವರ ಪರ ಶ್ರೀ. ಆರ್ ವಿ ಎನ್ ಕೆ ವಕೀಲರಿಂದಃ</u>**

ನನ್ನ ಜನ್ಮ ದಿನಾಂಕ 16-08-1984 ಆಗಿರುತ್ತದೆ. ನಾನು ಡೀಪ್ಲೋಮಾ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ತಂದೆ ವೆಂಕಟಪ್ಪ 2017 ರಲ್ಲಿ ತೀರಿಹೋಗಿರುತ್ತಾರೆ. ಈ ದಾವೆಯನ್ನು ಮೊದಲಿಗೆ ಕೋಲಾರ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಕೋಲಾರ ನ್ಯಾಯಾಲಯದಲ್ಲಿ ಈ ದಾವೆ ಓ.ಎಸ್.ನಂ.462/2007 ರಂತೆ ನೋಂದಣಿಯಾಗಿತ್ತು. ಸದರಿ ದಾವೆ ನನ್ನ ತಂದೆ ವೆಂಕಟಪ್ಪ ಸಲ್ಲಿಸಿದ್ದರು ಎಂದರೆ ಸರಿ. ಮೊದಲಿಗೆ ಈ ದಾವೆಯನ್ನು ನನ್ನ ತಂದೆ ರಾಧಾಬಾಯಿ, ಶ್ರೀಶಾಂತ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ಮೊದಲಿಗೆ ಎರಡು ಆಸ್ತಿಗಳ ಮೇಲೆ ಈ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ಈ ದಾವೆಯಲ್ಲಿ ಅಡ್ವರ್ಸ ಪಜೇಷನ್ ಮತ್ತು ಮಾಲೀಕತ್ವ ಕುರಿತು ದಾವೆ ಸಲ್ಲಿಸಿರುತ್ತಾರೆ. ನನ್ನ ತಂದೆ 1971 ರಿಂದ ದಾವಾ ಸ್ವತ್ತಿನ ಸ್ವಾಧೀನ ಇಲ್ಲಿಯವರೆಗೂ ಇದ್ದಾರೆಂದು ದಾವೆಯಲ್ಲಿ ಹೇಳಿರುತ್ತಾರೆ. ನನ್ನ ತಂದೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವ ಬಗ್ಗೆ ಪಹಣಿ ಪತ್ರಿಕೆ ಮತ್ತು ಕಂದಾಯ ಕಟ್ಟಿರುವ ರಶೀದಿ, ಪಟ್ಟಾ ಪುಸ್ತಕ ಹಾಜರುಪಡಿಸಿರುತ್ತಾರೆ. ದಾವಾ ಐಟಂ ನಂ.1 ಸರ್ವೆ ನಂ.16/2 ಆಗಿರುತ್ತದೆ. ಅದು ನಿಪಿ-1 ರಂತೆ 5 ಎಕರೆ 2 ಗುಂಟೆ ಇರುತ್ತದೆ. ನಿಪಿ-1 ರ ಕಾಲಂ ನಂ.9 ರಲ್ಲಿ ಕಬ್ಜೇದಾರರು ಮತ್ತು ಸ್ವಾಧೀನದಾರನ ತಂದೆಯ ವಿಳಾಸ ಅದರಲ್ಲಿ ಮೊದಲನೆ ಹೆಸರು ತುಳಸಿಬಾಯಿ ಎಂದು ನಮೂದಾಗಿರುತ್ತದೆ. ತುಳಸಿ ಬಾಯಿ ಮತ್ತು 1 ನೇ ಪ್ರತಿವಾದಿ ರಾಧಾಬಾಯಿಗೆ ಏನು ಸಂಬಂಧ ಎನ್ನುವ ಪ್ರಶ್ನೆಗೆ ಸಾಕ್ಷಿ ಯಾವುದೇ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ನಿಪಿ-1 ರ ಕಾಲಂ ನಂ.9 ರಲ್ಲಿ 2 ನೇ ಹೆಸರು ಫ್ರಾಣೇಶಚಾರ್ಯರವರದ್ದಾಗಿರುತ್ತದೆ. ತುಳಸಿಬಾಯಿ ಫ್ರಾಣೇಶಚಾರ್ಯರವರ ತಂಗಿ ಆಗಿರುತ್ತಾರೆ. ನಿಪಿ-1 ರ ಕಾಲಂ ನಂ.10 ರಲ್ಲಿ ಪಿತ್ರಾರ್ಜಿತ ಎಂದು ನಮೂದಾಗಿರುತ್ತದೆ. ನಿಪಿ-1 ರಲ್ಲಿ ತುಳಸಿಬಾಯಿ ಫ್ರಾಣೇಶಚಾರ್ಯರವರ ಪಿತ್ರಾರ್ಜಿತ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಸದರಿ ಸ್ವತ್ತಿನ ಸ್ವಾಧೀನದಲ್ಲಿರುತ್ತೇವೆ ಎಂದು ಹೇಳುತ್ತಾರೆ. ನಿಪಿ-1 ರಂತೆ ಕಾಲಂ ನಂ.9 ರಲ್ಲಿ ಖಾತೆ

ನಂಬರ 17 ಎಂದು ನಮೂದಾಗಿರುತ್ತದೆ. ನಿಪಿ-1 ರಲ್ಲಿ ಕಂದಾಯ ರೂ.8.49 ಪೈಸೆ ಎಂದು ನಮೂದಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಗೊತ್ತಾಗುತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-1 ನನ್ನ ತಂದೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆ ಎಂದರೆ ಸರಿ. ನಿಪಿ-1 ರಲ್ಲಿರುವ ವಿಚಾರಗಳು ನಾನು ತಿಳಿದುಕೊಂಡಿರುತ್ತೇನೆ. ನಿಪಿ-1 ರ ಕಾಲಂ ನಂ.12 ರಲ್ಲಿ ವೆಂಕಟಪ್ಪ ಮತ್ತು ವೆಂಕಟರಮಣಪ್ಪ ಎಂದು ನಮೂದಾಗಿರುತ್ತದೆ. ಸದರಿ ನಿಪಿ-1 ರ ಕಾಲಂ ನಂ.12 ರಲ್ಲಿ ಸಾಗುವಳಿ ಪದ್ದತಿ ಎಂದು ನಮೂದಾಗಿರುತ್ತದೆ. ಅದೇ ರೀತಿ ಕಾಲಂ ನಂ.12 ರಲ್ಲಿ ವಾರ ಎಂದು ನಮೂದಾಗಿರುತ್ತದೆ. ನನಗೆ ವಾರ ಎಂದರೆ ಗೊತ್ತಿಲ್ಲ. ನಾನು ನನ್ನ ವಕೀಲರ ಜೊತೆ ನಿಪಿ-1 ರಲ್ಲಿ ವಾರ ಎಂದು ನಮೂದಾಗಿರುವ ಬಗ್ಗೆ ವಿಚಾರಿಸಿ ಯಾವುದೇ ಮಾಹಿತಿ ಪಡೆದಿರುವುದಿಲ್ಲ. ಸಾಕ್ಷಿ ಮುಂದುವರಿದು ಸದರಿ ದಾಖಲೆ ನನ್ನ ತಂದೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ.

**ಪ್ರಶ್ನೆಃ-** ನಿಪಿ-1 ರಲ್ಲಿ ತೋರಿಸಿರುವಂತೆ ತುಳಸಿಬಾಯಮ್ಮ, ಪ್ರಾಣೇಶಚಾರ್ಯ ಸ್ವತ್ತಿನ ಮಾಲೀಕರು ಮತ್ತು ವೆಂಕಟರಮಣಪ್ಪ, ವೆಂಕಟಪ್ಪ ಸದರಿ ಸ್ವತ್ತಿನಲ್ಲಿ ಗೇಣಿದಾರರು ಆಗಿದ್ದರ ಮತ್ತು ಗೇಣಿದಾರರು ಸ್ವತ್ತಿನಲ್ಲಿ ಬೆಳೆದ ಬೆಳೆಯಿಂದ ಅರ್ಧ ಪಾಲು ಭೂ ಮಾಲೀಕರಾದ ತುಳಸಿಬಾಯಮ್ಮ, ಪ್ರಾಣೇಶಚಾರ್ಯರವರಿಗೆ ನೀಡುತ್ತಿದ್ದರು?

**ಉತ್ತರಃ-** ಪ್ರಾಣೇಶಚಾರ್ಯ ಇರುವವರೆಗೆ ನನ್ನ ತಂದೆ ವೆಂಕಟಪ್ಪನ ತಂದೆ ಮುನಿಶಾಮಪ್ಪ ಅರ್ಧ ಬೆಳೆದಿರುವ ಬೆಳೆ ಪ್ರಾಣೇಶಚಾರ್ಯರವರಿಗೆ ನೀಡುತ್ತಿದ್ದರು. ಪ್ರಾಣೇಶಚಾರ್ಯ ತೀರಿಹೋದ ನಂತರ ಯಾವುದೇ ಬೆಳೆ ನನ್ನ ತಾತ ಮುನಿಶಾಮಪ್ಪ ನೀಡಿರುವುದಿಲ್ಲ.

ನನ್ನ ತಂದೆ ವಾದಪತ್ರದಲ್ಲಿ ಮತ್ತು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ತಾತ ಪ್ರಾಣೇಶಚಾರ್ಯರವರಿಗೆ ಬೆಳೆದ ಫಸಲಿನಲ್ಲಿ ಅರ್ಧ ಭಾಗ ನೀಡುತ್ತಿದ್ದರು ಎಂದು ಹೇಳಿ ಬರೆಸಿರುವುದಿಲ್ಲ. ನನ್ನ ತಾತನ ಮನೆತನದ ಹೆಸರು ಕೊಡಿಗೆ ಮುನಿಶಾಮಪ್ಪ ಆಗಿರುತ್ತದೆ. ಊರಿನಲ್ಲಿ ನನ್ನ ತಂದೆಗೆ ಕೊಡಿಗೆ ವೆಂಕಟಪ್ಪ ಮತ್ತು ನನ್ನ ತಾತನಿಗೆ ಕೊಡಿಗೆ ಮುನಿಶಾಮಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ 1976 ರಿಂದ 1981 ರವರೆಗೆ ವಾರ ಎಂದು ಬರೆಯಲಾಗಿರುತ್ತದೆ ಎನ್ನುವ

ಪ್ರಶ್ನೆಗೆ ಸಾಕ್ಷಿ ಬರವಣಿಗೆ ಸರಿಯಾಗಿ ಕಾಣಿಸುತ್ತಿಲ್ಲ ಎಂದು ಹೇಳುತ್ತಾರೆ. 1976 ರಿಂದ 1981 ರವರೆಗೆ ಪಹಣಿಗಾಗಿ ಅರ್ಜಿ ಕಂದಾಯ ಇಲಾಖೆ ಸಲ್ಲಿಸಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ದಾವಾ ಐಟಂ ನಂ.1 ಸರ್ವೆ ನಂ.16/2 ತರಿ ಅಥವಾ ಬಾಗಾಯತ್ ಜಮೀನು ಎನ್ನುವ ಪ್ರಶ್ನೆಗೆ ಸಾಕ್ಷಿ ಮಳೆ ಆಧಾರಿತ ಬೆಳೆ ಬೆಳೆಯುತ್ತಿದ್ದೇವು ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ರಾಗಿ, ಕಡತೆಕಾಯಿ, ಅವರೇ, ಬೆಳೆ, ಜೋಳ, ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಬೆಳೆಗಳಲ್ಲಿ ನನ್ನ ತಾತ ಪ್ರಾಣೇಶಚಾರ್ಯರವರಿಗೆ ಅವರ ಇರುವವರೆಗೆ ಸ್ವಲ್ಪ ಬೆಳೆ ಕೊಡುತ್ತಿದ್ದರು. ದಿನಾಂಕ 01-03-1973 ರಲ್ಲಿ ಊಳುವವನು ಒಡೆಯಎಂದು ಕಾನೂನು ಬಂದ ನಂತರ ನನ್ನ ತಂದೆ ಅಥವಾ ತಾತ ಸದರಿ ದಾವಾ ಐಟಂ ನಂ.1 ಅವರಿಗೆ ಮಾಲಿಕನೆಂದು ಘೋಷಿಸಲು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿರುವುದು ನನಗೆ ಮಾಹಿತಿ ಇಲ್ಲ. 2007 ರಿಂದ ನಾನು ನನ್ನ ತಂದೆ ಜೊತೆ ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಬರೆದಂತೆ ಪ್ರಾಣೇಶಚಾರ್ಯ ಇರುವ ವರೆಗೆ ನನ್ನ ತಾತ ಬೆಳೆದ ಫಸಲಿನಲ್ಲಿ ಸ್ವಲ್ಪ ಪ್ರಾಣೇಶಚಾರ್ಯರವರಿಗೆ ನೀಡುತ್ತಿದ್ದರು. ನನ್ನ ತಾತ ಕೊಡಿಗೆ ಮುನಿಶಾಮಿ ನಾನು ಜನಿಸುವ ಪೂರ್ವದಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆ ಜಮೀನು ಸಾಗುವಳಿ ಮಾಡುತ್ತಿದ್ದ ಬಗ್ಗೆ ನನಗೆ ಬುದ್ದಿ ಬಂದಾಗಿನಿಂದ ವಾರ ನೀಡುತ್ತಿದ್ದರಾ? ಎನ್ನುವ ಪ್ರಶ್ನೆಗೆ ಸಾಕ್ಷಿ ಯಾರೂ ಕೇಳಿರುವುದಿಲ್ಲ ನಾವೂ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ತುಳಸಿಬಾಯಿ ಮತ್ತು ಪ್ರಾಣೇಶಚಾರ್ಯ ರವರ ಅನುಮತಿ ಮೇರೆಗೆ ನನ್ನ ತಾತ ಮತ್ತು ತಂದೆ ದಾವಾ ಐಟಂ ನಂ.1 ರಲ್ಲಿ ಊಳುವೂ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.
ಸಹಿ/-
(ದಯಾನಂದ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.